ಕರ್ನಾಟಕ ವಿಧಾನ ಸಭೆ

ಶನಿವಾರ ದಿನಾಂಕ ೨೮ನೇ ಫೆಬ್ರವರಿ ೧೯೮೭, ಫಾಲ್ಗುಣ ೯, ೧೯೦೮ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೩೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ಸಂತಾಪ ಸೂಚನೆಗಳು

ಅಧ್ಯಕ್ಷರು.—ಈ ಕೆಳಕಂಡ ಮಾಜಿ ಸದಸ್ಯರು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

೧ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಎಸ್. ರಾಮಪ್ಪ ಅವರು ದಿನಾಂಕ ೬-೨-೧೯೮೭ ರಂದು ನಿಧನರಾದರು ಶ್ರೀಯುತರು ೧೯೬೧ ರಿಂದ ೧೯೪೯ ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೨ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಕೋಮಾರಲಗಂಗಾ ಶೆಟ್ಟಿಯವರು ದಿನಾಂಕ ೧೬-೨-೧೯೮೭ ರಂದು ನಿಧನರಾದರು. ಶ್ರೀಯವರು ೧೯೪೧ ರಿಂದ ೧೯೪೫ರ ವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಸದನದಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯ ಪ್ರತಿಯನ್ನು ಅಗಲಿದ ಸದಸ್ಯರುಗಳ ಕುಟುಂಬದವರಿಗೆ ಕಳುಹಿಸಿ ಕೊಡಲಾಗುವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Notification No. FD 137 CSH 86 (I) & (II) dated 12th December 1986.

Exemption of Tax on the sale of 'News Print'

as required under Section 8 (2) of the Karnataka Sales Tax Act, 1957.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಬಿ ರಾಚಯ್ಯ (ಗೃಹ ಸಚಿವರು) —ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನ ಮುಂದೆ ಇರತಕ್ಕಂಥ ೧೯೫೭ನೇ ಇಸವಿಯ ತನಿಖಾ ಆಯೋಗಗಳ ಶಾಸನದ ೩ (೪)ನೇ ಕಲಮಿನ ಮೇರೆಗೆ ದಿನಾಂಕ ೬ನೇ ಮಾರ್ಚ್ ೧೯೮೫ರಲ್ಲಿ ಹೊನ್ನಾಳಿಯಲ್ಲಿ ನಡೆದ ಪೋಲೀಸ್ ಗೋಲಿಬಾರಿನ ಬಗ್ಗೆ ತನಿಖಾ ಆಯೋಗದ